# 14ನೇ ದಲ್ಲೈಲಾಮಾ

**ಜಗತ್ತಿನ ಎಲ್ಲ ಟಿಬೇಟನ್ನರ ಸರ್ವೋಚ್ಚ ಧಾರ್ಮಿಕ ಹಾಗೂ ರಾಜಕೀಯ ನಾಯಕ ದಲ್ಲೈಲಾಮಾ ಅವರು ಇತ್ತೀಚೆಗಷ್ಟೇ 75ನೇ ವರ್ಷಕ್ಕೆ ಕಾಲಿಟ್ಟರು. ಅವರ ಹುಟ್ಟುಹಬ್ಬದ ಸಂಭ್ರಮ ವಿಶ್ವದೆಲ್ಲೆಡೆ ಕಂಡು ಬಂತು.**

★ ಹನಿ




ಟೆಂಜಿನ್ ಗ್ಯಾಟ್ಸೊ ಅಂದರೆ ಈಗ ಯಾರಿಗೂ ಗೊತ್ತಾಗಲಿಕ್ಕಿಲ್ಲ. ಸ್ವತಃ 14ನೇ ದಲ್ಲೈ ಲಾಮಾ ಅವರಿಗೂ! ಅದು ಅವರ ಪೂರ್ವಾಶ್ರಮದ ಹೆಸರು! ಈಶಾನ್ಯ ಟಿಬೆಟ್‌ನ ಪುಟ್ಟ ಹಳ್ಳಿ ಟಾಕ್ಸರ್‌ನಲ್ಲಿ ಹುಟ್ಟಿದ ಟೆಂಜಿನ್, ಈಗ ಜಗತ್ತಿನ ಎಲ್ಲ ಟಿಬೇಟನ್ನರ ಸರ್ವೋಚ್ಚ ಧಾರ್ಮಿಕ ಹಾಗೂ ರಾಜಕೀಯ ನಾಯಕ. ಇತ್ತೀಚೆಗಷ್ಟೇ 75ನೇ ವರ್ಷಕ್ಕೆ ಕಾಲಿಟ್ಟ ದಲ್ಲೈಲಾಮಾ ಅವರ ಹುಟ್ಟುಹಬ್ಬದ ಸಂಭ್ರಮ ಎಲ್ಲೆಡೆ ಕಂಡು ಬಂತು. (ಜನನ ಜುಲೈ 6, 1935) ಅದಕ್ಕೂ ಕಾರಣವಿದೆ. ಈವರೆಗಿನ ದಲ್ಲೈ ಲಾಮಾಗಳ್ಯಾರೂ 75ರ ಹರೆಯವನ್ನು ಮುಟ್ಟಿಯೇ ಇಲ್ಲವಂತೆ.

ಬೋಧಿಸತ್ವರೇ ಪುನರ್ಜನ್ಮ ತಳೆದು ದಲ್ಲೈಲಾಮಾ ಆಗಿದ್ದಾರೆ ಎನ್ನುವುದು ಅನುಯಾಯಿಗಳ ನಂಬಿಕೆ. ಈಗಿನ 14ನೇ ದಲ್ಲೈ ಲಾಮಾ ಅವರು ಹಿಂದಿನ 13ನೇ ದಲ್ಲೈಲಾಮಾ ಅವರ ಅವತಾರ. ಹಿಂದಿನವರಿಗೆ ಹೋಲಿಸಿದರೆ 14ನೇ ದಲ್ಲೈಲಾಮಾ ಎದುರಿಸಿದ ಸವಾಲುಗಳು ಹೆಚ್ಚು ಸಂಕೀರ್ಣವಾದದ್ದು. ಸವಾಲುಗಳು ರಾಜಕೀಯವಾಗಿದ್ದಾಗಲೂ ಯಶಸ್ವಿಯಾಗಿ ಎದುರಿಸಿ ಜಾಗತಿಕ ಮಟ್ಟದಲ್ಲಿ ಅಪೂರ್ವ ವ್ಯಕ್ತಿತ್ವವನ್ನು ಸಾಧಿಸಿರುವುದು ಇವರ ಹೆಗ್ಗಳಿಕೆ.

ಈಗಿನ ದಲ್ಲೈಲಾಮಾ ಅವರನ್ನು ಅವರ 2ನೆ ವಯಸ್ಸಿನಲ್ಲೇ 13ನೇ ದಲ್ಲೈಲಾಮಾರ ಅವತಾರ ಎಂದು ಗುರುತಿಸಲಾಯಿತು. 6ರ ವಯಸ್ಸಿನಲ್ಲಿ ಗುರುಕುಲ ಶಿಕ್ಷಣ ಆರಂಭಿಸಿದರು. ಕುಟುಂಬದಲ್ಲಿ ಈ ಹಿಂದೆಯೇ ಇಬ್ಬರು ಸೋದರರು ಲಾಮಾ ಆಗಿದ್ದು ಅಷ್ಟರ ಮಟ್ಟಿಗೆ ಅವರ ಕೆಲಸವನ್ನು ಹಗುರಗೊಳಿಸಿತ್ತು. ನಾಲ್ವರು ಸೋದರರು, ಇಬ್ಬರು ಸೋದರಿಯರ ದೊಡ್ಡ ಕೃಷಿ ಕುಟುಂಬವದು. ಗುರುಕುಲದಲ್ಲಿ ತರ್ಕ, ಟಿಬೆಟಿಯನ್ ಕಲೆ– ಸಂಸ್ಕೃತಿ, ಮೆಡಿಸಿನ್, ಸಂಸ್ಕೃತ, ಬೌದ್ಧ ಫಿಲಾಸಫಿಗಳನ್ನು ಓದಿ ಮನನ ಮಾಡಿಕೊಂಡ ದಲ್ಲೈಲಾಮಾ, 23ರ ಹರೆಯದಲ್ಲೇ ಲ್ಹಾಸಾದ ಜೊಕಾಂಗ್ ಟೆಂಪಲ್‌ನ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅದು ಬುದ್ಧಿಸ್ಟ್ ಫಿಲಾಸಫಿಯ ಡಾಕ್ಟರೇಟ್‌ಗೆ ಸಮ.

1949ರಲ್ಲಿ ಟಿಬೆಟ್ ಮೇಲೆ ಚೀನಾ ನಡೆಸಿದ ಆಕ್ರಮಣ ಹೊಸ ರಾಜಕೀಯ ಸವಾಲುಗಳನ್ನು ಹುಟ್ಟು ಹಾಕಿತು. ಅಲ್ಲಿಂದಾಚೆಗಿನದ್ದು ಕಲ್ಲು ಮುಳ್ಳುಗಳ ಹಾದಿ. ಟಿಬೆಟ್‌ನಲ್ಲಿ ಪ್ರತ್ಯೇಕ ಧಾರ್ಮಿಕ ಐಡೆಂಟಿಟಿಯೊಂದಿಗೆ ಸ್ವತಂತ್ರವಾಗಿ ಧರ್ಮಪ್ರಚಾರ ನಡೆಸುತ್ತಿದ್ದ ದಲ್ಲೈಲಾಮಾ ಹೊಸ ಸವಾಲುಗಳನ್ನು ದಿಟ್ಟತನದಿಂದಲೇ ಎದುರಿಸಿದರು. 1954ರಲ್ಲಿ ಚೀನಾದ ಮಹಾನಾಯಕ ಮಾವೊ ಜೆಡಾಂಗ್ ಜತೆಗೆ ಮಾತುಕತೆಗೆಂದು ಬೀಜಿಂಗ್‌ಗೆ ತೆರಳಿದ್ದರು ದಲ್ಲೈಲಾಮಾ. ಮಾತುಕತೆ ಯಶಸ್ವಿ ಆಗಲೇ ಇಲ್ಲ. 1959ರಲ್ಲಿ ತೀವ್ರ ರಾಜಕೀಯ ಬೆಳವಣಿಗೆಯೊಂದರಲ್ಲಿ ಚೀನಾದ ಸೇನೆಯೇ ಟಿಬೇಟನ್ನರ ಮೇಲೆ ಮುಗಿಬಿದ್ದಾಗ, ದಲ್ಲೈಲಾಮಾ ಬೀಜಿಂಗ್‌ನಿಂದ ಪಲಾಯನ ಮಾಡಬೇಕಾದ ಪರಿಸ್ಥಿತಿ ಬಂತು. ಲ್ಹಾಸಾದಲ್ಲಿ ಸಾವಿರಾರು ಟಿಬೇಟನ್ನರ ಮೇಲೆ ಸೈನ್ಯದ ಅತಿರೇಕ ನಡೆಯಿತು. ಕೈಬೆರಳೆಣಿಕೆಯ ಅನುಯಾಯಿಗಳೊಂದಿಗೆ ದಲ್ಲೈಲಾಮಾ ವೇಷ ಮರೆಸಿಕೊಂಡು ಅಲ್ಲಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದದ್ದೇ ದೊಡ್ಡ ಸಾಹಸಗಾಥೆ.

ಭಾರತದ ಧರ್ಮಶಾಲಾದಲ್ಲಿ ಟಿಬೇಟನ್ನರ ದೇಶಭ್ರಷ್ಟ ಸರಕಾರ ಸ್ಥಾಪನೆಗೊಂಡಿದೆ. ಭಾರತದ ಹಲವೆಡೆ ಟಿಬೇಟನ್ನರಿಗೆ ವಿಶೇಷ ಕಾಯ್ದೆಯಡಿ ಸರಕಾರ ಜಮೀನು ನೀಡಿ ಆಶ್ರಯ ಒದಗಿಸಿದೆ. ಬೌದ್ಧ ಧರ್ಮದ ಅನುಸರಣೆಗೆ, ಪ್ರಚಾರಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಕರ್ನಾಟಕದಲ್ಲಂತೂ 45 ಸಾವಿರಕ್ಕೂ ಹೆಚ್ಚು ಟಿಬೆಟ್ ನಿರಾಶ್ರಿತರು ಆಶ್ರಯ ಪಡೆದಿದ್ದಾರೆ. ಕರ್ನಾಟಕದ ಎರಡೂ ಟಿಬೇಟನ್ ಶಿಬಿರಗಳಿಗೆ ದಲ್ಲೈಲಾಮಾ ಆಗಾಗ್ಗೆ ಭೇಟಿ ನೀಡುತ್ತಾರೆ.

ಸುಮಾರು 62 ದೇಶಗಳಲ್ಲಿ ಪ್ರವಾಸ ಮಾಡಿರುವ ದಲ್ಲೈಲಾಮಾ 1989ರಲ್ಲಿ ನೊಬೆಲ್ ಶಾಂತಿ ಪುರಸ್ಕಾರವನ್ನೂ ಪಡೆದರು. ಗೌರವ ಡಾಕ್ಟರೇಟ್‌ಗಳ ಸಹಿತ ಸುಮಾರು 84ಕ್ಕೂ ಹೆಚ್ಚು ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬಂದಿವೆ. 72 ಪುಸ್ತಕಗಳನ್ನು ಅವರು ಬರೆದಿದ್ದಾರೆ. 'ಫ್ರೀಡಂ ಇನ್ ಎಕ್ಸೈಲ್' ಹೆಸರಿನ ಅವರ ಆತ್ಮಕಥನ ಅತ್ಯಂತ ಜನಪ್ರಿಯ ಪುಸ್ತಕ.

■